ಇರಬಾರದು. ಅಲ್ಲಿ ಕೇವಲ ನೃತ್ಯವಷ್ಟೇ ಅಲ್ಲ, ಅಧ್ಯಯನವೂ ಮುಖ್ಯ. ಸಾಮಾನ್ಯವಾಗಿ ನೃತ್ಯವನ್ನು ಪ್ರೀತಿಸುತ್ತ ಈ ಕ್ಷೇತ್ರಕ್ಕೆ ಬರುವ ಅನೇಕರು ತಮ್ಮ ಗುರುಗಳು ಹೇಳಿಕೊಟ್ಟ ಹತ್ತು ಹನ್ನೆರಡು ನೃತ್ಯ ಪ್ರಸ್ತುತಿಗಳನ್ನು ಚೆನ್ನಾಗಿ ಪದಗತ ಮಾಡಿಕೊಳ್ಳುತ್ತಾರೆ. ಆ ಬಳಿಕ ವಿಕಾಸದ ಉಸಾಬರಿಗೆ ಹೋಗುವುದಿಲ್ಲ. ಅಧ್ಯಯನದತ್ತ ಮುಖಮಾಡುವುದಿಲ್ಲ. ನನ್ನ ಪ್ರಕಾರ, ಗುರುಗಳು ಏನು ಕಲಿಸುತ್ತಾರೋ ಅದು ನಮಗೆ ಶಾಲೆಯಲ್ಲಿ ಎಬಿಸಿಡಿ ಕಲಿಸಿದಂತೆ. ನಾವು ವರ್ಣಮಾಲೆಯನ್ನು ಕಲಿತ ಬಳಿಕ ಪದಗಳನ್ನು ಕಲಿಯುತ್ತೇವೆ, ಅದಾದ ನಂತರ ನಮ್ಮದೇ ವಾಕ್ಯಗಳನ್ನು ರಚಿಸಲು ಕಲಿಯುತ್ತೇವೆ. ನಮ್ಮ ಆಲೋಚನೆಗಳನ್ನು ಇತರರಿಗೆ ದಾಟಿಸುವುದು, ಅಥವಾ ಹೊಸ ರೀತಿಯ ಕಥೆಯನ್ನು ಇನ್ನೊಬ್ಬರಿಗೆ ಹೇಳುವುದು ನಮ್ಮ ಉದ್ದೇಶವಾಗಿರುತ್ತದೆ. ಅಂದಮೇಲೆ ನೃತ್ಯದ ಎಬಿಸಿಡಿ ಕಲಿತು ಅಲ್ಲಿಗೇ ನಿಂತುಬಿಡುವುದು ಸರಿಯಲ್ಲ. ನಮ್ಮದೇ ಆದ ಆಲೋಚನೆಗಳನ್ನು ಮತ್ತು ಹೊಸ ರೀತಿಯ ಕಥೆಗಳನ್ನು ಜನರಿಗೆ ಹೇಳುತ್ತ ನಾವು ಬೆಳೆಯಬೇಕು. ಆ ಮೂಲಕ ನೃತ್ಯ ಕ್ಷೇತ್ರವನ್ನು ಬೆಳೆಸಬೇಕು. ಇದು ಕಲೆಯ ಏಳಿಗೆಗೂ ಒಳ್ಳೆಯದು, ನಮ್ಮ ಸ್ವಂತ ಏಳಿಗೆಗೂ ಒಳ್ಳೆಯದು.

**◆ ನಿಮ್ಮ ಓದು ಮತ್ತು ಅಧ್ಯಯನದ ಬಗ್ಗೆ ಹೇಳುವಿರಾ?**

ನಾನು ನಿರಂತರವಾಗಿ ಓದುತ್ತಿರುತ್ತೇನೆ. ಆದರೆ ನನ್ನ ಓದಿಗೆ ಒಂದು ಫೋಕಸ್ ಇರುತ್ತದೆ. ಉದಾಹರಣೆಗೆ ನಾನು 'ಕೋರ್ಟಿಸಾನ್ ಪ್ರೊಜೆಕ್ಟ್' ಅನ್ನು ಕೈಗೆತ್ತಿಕೊಂಡಾಗ, ಅದಕ್ಕೆ ಪೂರಕವಾದ ಕೃತಿಗಳನ್ನು ಓದುತ್ತೇನೆ. ಅಂತಹ ಪುಸ್ತಕಗಳಿಗಾಗಿ ಹುಡುಕಾಡುತ್ತೇನೆ. ಆದರೆ ಹೊಸ ತಲೆಮಾರಿನ ಕಲಾವಿದರು ಓದುವುದನ್ನು ಇಷ್ಟಪಡುವುದಿಲ್ಲ. ಹಾಗಾಗಿ ಅವರ ಸಂಶೋಧನೆಗಳು ಹೇಗೆ ಮುಂದುವರೆಯುತ್ತವೋ ಎಂದು ನೋಡುವ ಕುತೂಹಲ ನನಗೂ ಇದೆ. ನಾನು ಸೂಫಿ ಕಥಕ್ ಅನ್ನು ಪ್ರಸ್ತುತಪಡಿಸುತ್ತಿರುವುದನ್ನು ನೋಡಿ, ನನ್ನ ಯಶಸ್ಸನ್ನು ನೋಡಿ ಇತರರು ಇದೊಂದು 'ಟ್ರೆಂಡ್' ಎಂದು ಬಗೆದು ಅದನ್ನೇ ಅನುಕರಿಸುವುದನ್ನು ನೋಡಿ ನನಗೆ ಬಹಳ ಬೇಸರವಾಗುತ್ತದೆ. ನನ್ನ ಅಧ್ಯಯನದ ಜಂಗು ಹಿಡಿದು ಹೊಸ ತಲೆಮಾರಿನವರು ಅದನ್ನು ಮುಂದುವರೆಸಿದರೆ ಬಹಳ ಖುಷಿಯಾಗುತ್ತದೆ. ಯಾವುದೇ ಕಲಾವಿದರಾಗಲೀ, ಹಿರಿಯರು ಮಾಡಿದ ಸಾಧನೆಯ ಅನುಕರಣೆ ಮಾಡದೇ, ಅಲ್ಲಿಂದ ಮುಂದಕ್ಕೆ ಹೇಗೆ ನಾವು ಬೆಳೆಯಬಹುದು, ವಿಸ್ತರಿಸಬಹುದು ಎಂಬುದನ್ನು ತಿಳಿಯುವ ಪ್ರಯತ್ನ ಮಾಡಬೇಕು. ನೃತ್ಯದ ನಿರಂತರ ಅಭ್ಯಾಸ ಮತ್ತು ಓದುವಿಕೆಯು ಜೊತೆಯಾಗಿ ಇದ್ದಾಗ ನಮ್ಮ ಕಲೆ ಮತ್ತು ವ್ಯಕ್ತಿತ್ವ ವಿಕಾಸಗೊಳ್ಳುತ್ತದೆ.

ನಾನು ಎಲ್ಲರಂತೆಯೇ ಕಥಕ್ ನೃತ್ಯವನ್ನು ಕಲಿತೆ. ಆದರೆ ಅದರ ಪ್ರಸ್ತುತಿಗಾಗಿ ನನ್ನದೇ ಆದ ಕಥೆಗಳನ್ನು ಬರೆದೆ. ಅದಲ್ಲದೆ ಸೂಫಿ ಸಂಗೀತದ ಕುರಿತೂ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡು, ಭಾರತದಲ್ಲಿ ಹಾಗೂ ಮಧ್ಯ ಏಷ್ಯಾದ ವಿವಿಧ ದೇಶಗಳಲ್ಲಿ ಪ್ರವಾಸ ಮಾಡಿ ಸೂಫಿ ತತ್ತ್ವದ ಆಳಅಗಲಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ನನ್ನ ಪ್ರಕಾರ ಕಲೆಯು ಕಾಲಕ್ಕೆ ತಕ್ಕಂತೆ ಬದಲಾಗಬೇಕು. ಒಂದು ಕಾಲದಲ್ಲಿ ಭಕ್ತಿ ಮಾರ್ಗವು ಉತ್ತುಂಗದಲ್ಲಿತ್ತು. ಆಗ ಕಲಾಪ್ರಕಾರಗಳು ಭಕ್ತಿಕೇಂದ್ರಿತವಾಗಿದ್ದವು. ನಂತರದ ದಿನಗಳಲ್ಲಿ ಕಾಲದ ಅಗತ್ಯವನ್ನು ಗುರುತಿಸುವುದೂ ನಮ್ಮ ಮುಂದಿರುವ ಸವಾಲಾಗಿದೆ.

**◆ ರಾಜನರ್ತಕಿಯರ ಕುರಿತು ಅಧ್ಯಯನ ನಡೆಸಿ ನೀವು ಪ್ರಸ್ತುತ ಪಡಿಸಿದ 'ಕೋರ್ಟಿಸಾನ್ ಪ್ರೊಜೆಕ್ಟ್' ಬಹಳ ಜನಪ್ರಿಯವಾಯಿತು. ಅದರ ತಯಾರಿ ಮತ್ತು ಫಲಿತಾಂಶಗಳ ಕುರಿತು ಹೇಳುವಿರಾ?**

ರಾಜನರ್ತಕಿಯರ ಕುರಿತು ಅಧ್ಯಯನ ಮಾಡಿದ್ದ ನಾನು 16 ವರ್ಷಗಳ ಹಿಂದೆ ನೃತ್ಯ ಪ್ರಸ್ತುತಿಯನ್ನು ಆಯೋಜಿಸಲು ಆರಂಭಿಸಿದೆ. ಬಹಳವೇನೂ ಹಿಂದಿನ ಕಥೆ ಹೇಳುತ್ತಿಲ್ಲ ನಾನು. ಕೇವಲ ಹತ್ತು ವರ್ಷದ ಹಿಂದೆ ರಾಜನರ್ತಕಿ (ತವಾಯಫ್)ಎಂಬ ಪದ ಇರುವ ಆಹ್ವಾನ ಪತ್ರಿಕೆಯಲ್ಲಿ ಪ್ರಾಯೋಜಕರು ತಮ್ಮ ಲಾಂಛನವನ್ನು ಹಾಕಲು ಹಿಂದೇಟು ಹಾಕುತ್ತಿದ್ದರು. ಅಂತಹ ಸಂದರ್ಭದಲ್ಲಿ ನಾನು ಕೆಲವೆಡೆ ಉಚಿತ ಪ್ರದರ್ಶನಗಳನ್ನೂ ಮಾಡಿದ್ದುಂಟು. 'ನೀವೇಕೆ ಈ ರಾಜನರ್ತಕಿಯರ ವಿಷಯದ ಹಿಂದೆ ಬಿದ್ದಿದ್ದೀರಿ.